ಮೂಲ ದಾವಾ ಸಂಖ್ಯೆ 18/2019

ವಾ.ಸಾ.1

ದಿನಾಂಕಃ 15.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. **ಪಾಟೀ ಸವಾಲುಃ ಶ್ರೀ ಎಂ.ಡಿ. – ಪ್ರತಿವಾದಿಯ ಪರ ವಕೀಲರಿಂದ**

ನನ್ನ ತಂದೆ ಚಂದ್ರ ರವರ ತಾಯಿಯ ಹೆಸರು ಪುಟ್ಟರಾಮಮ್ಮ. ಪುಟ್ಟರಾಮಮ್ಮರವರ ತಂದೆಯ ಹೆಸರು ನಂಜಯ್ಯ ಮತ್ತು ತಾಯಿಯ ಹೆಸರು ಚಿಕ್ಕಮ್ಮ. ಸದರಿ ನಂಜಯ್ಯ ಮತ್ತು ಚಿಕ್ಕಮ್ಮ ರವರಿಗೆ ಒಟ್ಟು 2 ಗಂಡು ಮಕ್ಕಳು ಮತ್ತು 5 ಹೆಣ್ಣುಮಕ್ಕಳು.

ನಾನು ಮತ್ತು ಪ್ರತಿವಾದಿ ಕುಪ್ಯ ಗ್ರಾಮದ ನಿವಾಸಿಗಳು ಎಂದರೆ ಸರಿ. ದಾವಾದಲ್ಲಿ ಎರಡು ಆಸ್ತಿಗಳನ್ನು ನಮೂದಿಸಿದ್ದು, ಅವು ಸರ್ವೆ ನಂ.234/1 ರ 1 ಎಕರೆ 21 ಗುಂಟೆ ಮತ್ತು 234/3 ರ 35 ಗುಂಟೆ ಆಗಿವೆ. ಆ ಎರಡೂ ಆಸ್ತಿ ಗಳ ಖಾತೆಗಳು ಇಲ್ಲಿಯವರೆಗೂ ಸದರಿ ಚಿಕ್ಕಮ್ಮ ರವರ ಹೆಸರಿನಲ್ಲಿ ಇವೆ ಎಂದರೆ ಸರಿ. ಮೊದಲು ಅವರ ಹೆಸರಿನಲ್ಲಿ ಸರ್ವೆ ನಂ.234 ರ 2 ಎಕರೆ 16 ಗುಂಟೆಗೆ ಖಾತೆ ಇತ್ತು ಎಂದರೆ ಸರಿ. ಆ ನಂತರ ಸರ್ವೆ ನಂ.234 ಮೂರು ಪೋಡಾಗಿ ಸರ್ವೆ ನಂ.234/1 ರಿಂದ 3 ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಚಿಕ್ಕಮ್ಮ ರವರು 1992 ರಲ್ಲಿ ಮರಣ ಹೊಂದಿರುತ್ತಾರೆ. ಅವರು ಮರಣ ಹೊಂದಿದ ವೇಳೆಗೆ ಸದರಿ ಸರ್ವೆ ನಂ.234 ರಲ್ಲಿ 2 ಎಕರೆ 16 ಗುಂಟೆಗೆ ಖಾತೆ ಇತ್ತು ಎಂದರೆ ಸರಿ. ಸದರಿ ಚಿಕ್ಕಮ್ಮ ರವರು ಮರಣ ಹೊಂದಿದಾಗ ನನ್ನ ತಂದೆ ಚಂದ್ರ ಬದುಕಿದ್ದರು ಎಂದರೆ ಸರಿ. ಅವರು ಮರಣ ಹೊಂದಿದ ನಂತರ 21 ವರುಷಗಳ ವರೆಗೆ ನನ್ನ ತಂದೆ ಬದುಕಿದ್ದರು ಎಂದರೆ ಸರಿ. ನನ್ನ ತಂದೆಯ ಹೆಸರಿಗೆ ದಾವಾ ಆಸ್ತಿ ಗಳ ಖಾತೆ ನಮೂದಾಗಿರಲಿಲ್ಲ ಎಂದರೆ ಸರಿ.

ನನ್ನ ತಂದೆ 2013 ರಲ್ಲಿ ಮರಣ ಹೊಂದಿದರು ಎಂದರೆ ಸರಿ. ಅನಂತರ ದಾವಾಸ್ತಿಗಳ ಖಾತೆ ನನ್ನ ಮತ್ತು ನನ್ನ ತಾಯಿಯ ಹೆಸರಿಗೆ ನಮೂದಾಗಿಲ್ಲ ಎಂದರೆ ಸರಿ. ದಾವಾಸ್ತಿಗಳ ಖಾತೆಯನ್ನು ನಮ್ಮ ಹೆಸರಿಗೆ ಬದಲಾಯಿಸಿಕೊಳ್ಳಲು ನಾವು ಪ್ರಯತ್ನಿಸಿಲ್ಲ ಎಂದರೆ ಸರಿ.

ದಾವಾಸ್ತಿಗಳ ಕಂದಾಯವನ್ನು ನಾನು ಮತ್ತು ನನ್ನ ತಂದೆ ಇಲ್ಲಿಯವರೆಗೆ ಪಾವತಿಸಿಲ್ಲ ಎಂದರೆ ಸರಿ. ಹಾಗಾಗಿ ಈ ದಾವಾವನ್ನು ದಾಖಲಿಸುವ ವೇಳೆಗೆ ದಾವಾಸ್ತಿಗಳ ಸ್ವಾಧೀನದಲ್ಲಿ ನಾವು ಇದ್ದೆವು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಆ ಸ್ವಾಧೀನವನ್ನು ತೋರಿಸಲು ಯಾವುದೇ ಕಂದಾಯ ದಾಖಲೆ ಇಲ್ಲ ಎಂದರೆ ಸರಿ.

ಸದರಿ ಚಿಕ್ಕಮ್ಮ ರವರ ಮೊದಲನೇ ಮಗ ಮಹದೇವ ಮತ್ತು 2 ನೇ ಮಗ ಪ್ರತಿವಾದಿ ಎಂದರೆ ಸರಿ. ದಾವಾಸ್ತಿಗಳು ಮೂಲತಃ ಸದರಿ ಚಿಕ್ಕಮ್ಮ ರವರಿಗೆ ಸೇರಿದ್ದರಿಂದ 2002 ರಲ್ಲಿ ಆದ ಮೌಖಿಕ ವಿಭಾಗದಲ್ಲಿ ಅವುಗಳು ಪ್ರತಿವಾದಿಯ ಭಾಗಕ್ಕೆ ಬಂದಿವೆ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಆ ವಿಭಾಗದ ಪ್ರಕಾರ ಪ್ರತಿವಾದಿಯೂ ದಾವಾಸ್ತಿಗಳ ಸ್ವಾಧೀನದಲ್ಲಿ ಇದ್ದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯು ದಾವಾಸ್ತಿಗಳ ಮಾಲೀಕರಾಗಿದ್ದಾರೆ ಎಂದರೆ ಸರಿಯಲ್ಲ. ನನಗೆ ಮತ್ತು ನಮ್ಮ ಕುಟುಂಬದವರಿಗೆ ದಾವಾಸ್ತಿಗಳ ಮೇಲೆ ಮಾಲೀಕತ್ವ ಮತ್ತು ಸ್ವಾಧೀನದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗಳ ಸ್ವಾಧೀನದಲ್ಲಿ ನಾವು ಇಲ್ಲದಿದ್ದರೂ ಕೂಡಾ ಪ್ರತಿವಾದಿಗೆ ಸೇರಿರುವ ದಾವಾಸ್ತಿಗಳನ್ನು ಕಬಳಿಸುವ ಸಲುವಾಗಿ ಸುಳ್ಳು ದಾವಾ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಿ.ಪಿ.7 ರ ಕ್ರಯ ಪತ್ರದಲ್ಲಿ ನನ್ನ ತಂದೆಯ ಹೆಸರನ್ನು ಕೇವಲ ನಾಮಾಕಾವಸ್ತೆಗೆ ತೋರಿಸಿದ್ದು, ಆ ಕ್ರಯ ಪತ್ರದ ಆಸ್ತಿಯೂ ಸದರಿ ಚಿಕ್ಕಮ್ಮ ರವರಿಗೆ ಸೇರಿರುವ ಆಸ್ತಿ ಎಂದರೆ ಸರಿಯಲ್ಲ. ಹಾಗಾಗಿ ಸದರಿ ಆಸ್ತಿಯ ಮೇಲಿನ ಹಕ್ಕು ಮತ್ತು ಸ್ವಾಧೀನ ನನ್ನ ತಂದೆಗೆ ಬಂದಿಲ್ಲ ಎಂದರೆ ಸರಿಯಲ್ಲ. ಆ ಹಿನ್ನಲೆಯಲ್ಲಿ ದಾವಾಸ್ತಿಗಳ ಖಾತಾ ನನ್ನ ತಂದೆಯ ಹೆಸರಿಗೆ ಬದಲಾವಣೆ ಆಗಿರಲಿಲ್ಲ ಎಂದರೆ ಸರಿಯಲ್ಲ.

ಸದರಿ ಚಿಕ್ಕಮ್ಮ ರವರು ತನ್ನ ಜೀವಿತ ಕಾಲದಲ್ಲಿ ದಾವಾಸ್ತಿಗಳ ಕುರಿತು ನನಗಾಗಲಿ ಅಥವಾ ನನ್ನ ತಂದೆಗಾಗಲಿ ಯಾವುದೇ ದಾಖಲೆಯನ್ನು ಮಾಡಿಲ್ಲ ಎಂದರೆ ಸರಿ. ಹಾಗಾಗಿ ಅವರು ಮರಣ ಹೊಂದಿದ ನಂತರ ದಾವಾಸ್ತಿಯು ಪ್ರತಿವಾದಿಗೆ ವಾರಸುನಾತೆ ಮೂಲಕ ಬಂದಿದೆ ಎಂದರೆ ಸರಿಯಲ್ಲ.

ನಿ.ಪಿ.7 ರ ಕ್ರಯ ಪತ್ರವನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದಾವಾವನ್ನು ದಾಖಲಿಸಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ</u>.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ.**